# ಅಂತರಾಷ್ಟ್ರೀಯ ಮಾತೃ ಭಾಷಾ ದಿವಸ ಕಾರ್ಯಕ್ರಮದ ವರದಿ

ದಿನಾಂಕ 21.02.2023 ರ ಮಂಗಳವಾರ ಮಧ್ಯಾಹ್ನ 3.30ಕ್ಕೆ ಸಕಲೇಶಪುರ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ **ಭಾಷಾ ಸಂಘದ ವತಿಯಿಂದ "ಅಂತರಾಷ್ಟ್ರೀಯ ಮಾತೃ ಭಾಷಾ ದಿವಸ**", ಕಾರ್ಯಕ್ರಮವನ್ನು ನಡೆಸಲಾಯಿತು.






ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಶ್ರೀ ಕಿರಣ್ ಕುಮಾರ್ ಕೆ.ಎನ್ ರವರು ಅಂತರಾಷ್ಟ್ರೀಯ ಮಾತೃ ಭಾಷಾ ದಿವಸ ಕುರಿತಂತೆ ಮಾತನಾಡುತ್ತಿರುವುದು.







ಅಂತರಾಷ್ಟ್ರೀಯ ಮಾತೃ ಭಾಷಾ ದಿವಸ ಕುರಿತಾದ ವಿಚಾರ ಆಲಿಸುತ್ತಿರುವ ಪ್ರಶಿಕ್ಷಣಾರ್ಥಿಗಳು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಸ್ಥೆಯ **ಹಿರಿಯ ವಿದ್ಯಾರ್ಥಿ ಶ್ರೀ ಕಿರಣ್ ಕುಮಾರ್ ಕೆ.ಎನ್** ರವರು ಮಾತನಾಡುತ್ತಾ ಕನಸುಗಳನ್ನು ಕಾಣುವ ಭಾಷೆ ಯಾವುದು ಇರುತ್ತದೆಯೋ ಅದೇ ನಮ್ಮ ಮಾತೃಭಾಷೆ ಆಗಿರುತ್ತದೆ. ಕರುಳನ್ನು ಮುಟ್ಟುವಂತಹ ಭಾಷೆ, ಮನಸ್ಸು

ಹಾಗೂ ಹೃದಯವನ್ನು ಮುಟ್ಟುವಂತಹ ಭಾಷೆಯೇ ಮಾತೃಭಾಷೆ ಎನ್ನುತ್ತಾ ಭಾರತಕ್ಕೆ 1947 ರಲ್ಲಿ ಬ್ರಿಟಿಷ್ ಆಡಳಿತದಿಂದ ಸ್ವತಂತ್ರ ಸಿಕ್ಕಿತು. ಜತೆಗೆ ಭಾರತವು ವಿಭಜನೆ ಸಹ ಆಯಿತು. ಪಾಕಿಸ್ತಾನವನ್ನು ಹೊಸದಾಗಿ ರಚನೆ ಮಾಡಿ, ಅದರಲ್ಲಿ ಈಗಿರುವ ಪಾಕಿಸ್ತಾನವನ್ನು ಪಶ್ಚಿಮ ಪಾಕಿಸ್ತಾನ, ಪ್ರಸ್ತುತದ ಬಾಂಗ್ಲಾದೇಶವನ್ನು ಪೂರ್ವ ಪಾಕಿಸ್ತಾನ ಎಂದು ಕರೆಯಲಾಗುತ್ತಿತ್ತು. ಎರಡು ಪ್ರದೇಶಗಳಲ್ಲಿ ಇದ್ದ ಸಮಾನತೆ ಎಂದರೆ ಇಸ್ಲಾಂ ಅನುಯಾಯಿಗಳು. ಇದೇ ಕಾರಣಕ್ಕೆ ಮುಸ್ಲಿಂರೆಲ್ಲ ಒಂದೇ ದೇಶದಲ್ಲಿರಬಹುದು ಎಂಬ ಅಂದಾಜಿನಲ್ಲಿ ಒಂದೇ ದೇಶ ಎಂದು ಘೋಷಣೆ ಮಾಡಲಾಯಿತು. ಆದರೆ ಕೇವಲ ಒಂದು ವರ್ಷದಲ್ಲಿ ಈ ಅಂದಾಜು ಹುಸಿಯಾಯಿತು. ಪಶ್ಚಿಮ ಪಾಕಿಸ್ತಾನದಲ್ಲಿ ಮುಸ್ಲಿಂ ಸಮುದಾಯದವರು ಉರ್ದು ಭಾಷೆಯನ್ನು ಮಾತನಾಡುತ್ತಿದ್ದರು. ಪೂರ್ವ ಪಾಕಿಸ್ತಾನದ ಮುಸ್ಲಿಂ ಮತ್ತು ಇನ್ನಿತರ ಸಮುದಾಯದವರು ಬಾಂಗ್ಲಾ ಭಾಷೆ ಮಾತನಾಡುತ್ತಿದ್ದರು. ಪೂರ್ವ ಪಾಕಿಸ್ತಾನದಲ್ಲಿ ಹೆಚ್ಚಿನ ಜನಸಂಖ್ಯೆ ಇದ್ದು ಅಲ್ಲಿನ ಜನರು ಉರ್ದುವನ್ನೇ ಹೆಚ್ಚು ಬಳಕೆ ಮಾಡುತ್ತಿದ್ದರು. ಈ ಹಿನ್ನಲೆಯಲ್ಲಿ ಉರ್ದುವನ್ನೇ ಪಾಕಿಸ್ತಾನದ ಏಕಮಾತ್ರ ರಾಷ್ಟ್ರಭಾಷೆ ಎಂಬ ನಿರ್ಣಯವನ್ನು 1948 ರಲ್ಲಿ ಕೈಗೊಳ್ಳಲಾಯಿತು. ಆದರೆ ಬಾಂಗ್ಲಾವನ್ನು ಮತ್ತೊಂದು ರಾಷ್ಟ್ರಭಾಷೆ ಎಂದು ಪರಿಗಣಿಸಿ ಎಂಬ ಬೇಡಿಕೆಗೆ ಮನ್ನಣೆ ಸಿಗಲಿಲ್ಲ. ಈ ಹಿನ್ನಲೆಯಲ್ಲಿ ಭಾಷೆ ಕುರಿತ ಸಂಘರ್ಷಗಳು ಶುರುವಾದವು. ವಿದ್ಯಾರ್ಥಿಗಳು ಬೃಹತ್ ರ್ಯಾಲಿಗಳನ್ನು ಆರಂಭಿಸಿದರು. 1952 ಫೆಬ್ರುವರಿ 21 ರಂದು ಪೊಲೀಸರು ಪ್ರತಿಭಟನಾಕಾರರ ಮೇಲೆ ಗುಂಡಿನ ದಾಳಿ ನಡೆಸಿದರು. ಈ ಘಟನೆಯಲ್ಲಿ 5 ವಿದ್ಯಾರ್ಥಿಗಳು ಮೃತಪಟ್ಟರೆ, ನೂರಾರು ಜನರು ಗಾಯಗೊಂಡರು. 1953 ರಿಂದ ಈ ದಿನವನ್ನು ಬಾಂಗ್ಲಾದೇಶದವರು ಅಂತರರಾಷ್ಟ್ರೀಯ ಮಾತೃಭಾಷಾ ದಿನವನ್ನಾಗಿ ಆಚರಣೆ ಮಾಡಲಾರಂಭಿಸಿದರು ಎಂದು ಈ ದಿನದ ಇತಿಹಾಸವನ್ನು ಹಾಗೂ ಭಾಷೆಗಳ ಮಹತ್ವವನ್ನು ತಮ್ಮ ನುಡಿಗಳಲ್ಲಿ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಮಾತನಾಡುತ್ತಾ ಪ್ರತಿವರ್ಷ ಫೆಬ್ರುವರಿ 21 ರಂದು ಮಾತೃಭಾಷೆ ದಿನವನ್ನು ಆಚರಣೆ ಮಾಡಲಾಗುತ್ತದೆ. ಈ ದಿನದ ಆಚರಣೆಯ ಮುಖ್ಯ ಉದ್ದೇಶ, ಭಾಷೆ, ಸಂಸ್ಕೃತಿ ಮತ್ತು ಬಹು ಭಾಷಿಕತೆಯನ್ನು ಉಳಿಸುವುದಾಗಿದೆ. ಈ ಉದ್ದೇಶದಿಂದಾಗಿ ಯುನೆಸ್ಕೊ ಈ ದಿನವನ್ನು ಆಚರಣೆಗೆ ತಂದಿದೆ. ಯುನೆಸ್ಕೊ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳು ಮಾತೃಭಾಷೆ ದಿನವನ್ನು ಆಚರಿಸುತ್ತವೆ. ಮಾತೃಭಾಷೆ ತಾಯಿಯ ಭಾಷೆ, ಮಾತೃಭಾಷೆ ಭಾವನೆಗಳನ್ನು ಕೆರಳಿಸುವ ಭಾಷೆ ಮಾತೃಭಾಷೆಯ ಬಗ್ಗೆ ನಮಗೆ ಪ್ರೀತಿ-ಗೌರವ ಇರಬೇಕು ಎಂದು ಹೇಳಿದರು.

ಭಾಷಾ ಸಂಘದ ಸಂಯೋಜಕರಾದ ಶ್ರೀ ಮಂಜುನಾಥ ಆರ್ ರವರು ಅಂತರಾಷ್ಟ್ರೀಯ ಮಾತೃಭಾಷಾ ದಿನವನ್ನು ಭಾರತ ದೇಶವೊಂದೇ ಆಚರಿಸುತ್ತಿಲ್ಲ. ಭಾರತ ಸೇರಿದಂತೆ ವಿಶ್ವದ ಎರಡುನೂರು ದೇಶಗಳು ಇಂದು ಆಚರಿಸುತ್ತಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳಾದ ಕುಮಾರಿ ಅಂಭುಜಾಕ್ಷಿ ಹಾಗೂ ಶ್ರೀ ಆಂಜನೇಯ ರವರು ವಿಷಯ ಮಂಡನೆ ಮಾಡಿದರು.

ಕಾರ್ಯಕ್ರಮವನ್ನು ಪ್ರಶಿಕ್ಷಣಾರ್ಥಿ ಶ್ರೀ ಶಿವಕುಮಾರ ಸ್ವಾಗತಿಸಿ, ಶ್ರೀ ಮಂಜುನಾಥ ಆರ್ ರವರು ವಂದಿಸುವುದರೊಂದಿಗೆ ಕುಮಾರಿ ಶಿಫಾ ಅಚ್ಚುಕಟ್ಟಾಗಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

PRINCIPAL
J.S.S. Institute of Education
P.B. 26, SAKALESHPUR-573 134
Hassan Dist